# ಘೋರ ಮರಣ

■ ಮಲ್ಲಿಕಾರ್ಜುನ ಸುರಧೇನುಪುರ

ಸಿರಿವೆನ್ನೆಲಾ ರಾಜ್ಯದ ಸೇನಾನಾಯಕ ಗಂಗೊಂಡರಾಮನಿಗೆ ಸೈನಿಕನಾಗಿದ್ದ ಸೋಹನ್ ಲಲ್ಲಾ ಯಾವುದಕ್ಕೂ ಸಹಕರಿಸದೆ ಸಂಕಷ್ಟಗಳ ಸಮಯದಲ್ಲಿ ರಜೆ ಹಾಕಿ ತಪ್ಪಿಸಿಕೊಂಡುಬಿಡುತ್ತಿದ್ದ ಪ್ರವಾಹ, ಅತಿವೃಷ್ಟಿ, ಶತ್ರುಗಳ ದಾಳಿಯ ಸಮಯದಲ್ಲಿ ತನಗೆ ಆರೋಗ್ಯ ಸರಿ ಇಲ್ಲವೆಂದೋ, ಮನೆಯ ದೇವರ ದರ್ಶನಕ್ಕೆ ಹೋಗಬೇಕು ಎಂದೋ, ಸಂಬಂಧಿಕರ ಸಾವಾಗಿದೆ ಎಂದೋ, 'ಕಳ್ಳನಿಗೊಂದು ಪಿಳ್ಳೆ ನೆವ' ಎಂಬ ಗಾದೆ ಮಾತು ಆತನಿಗೆ ಅನ್ವಯವಾಗುವಂತೆ ಬದುಕುತಿದ್ದ. ಹೀಗೆ ಇವನನ್ನ ಹೀಗೆ ಬಿಟ್ಟರೆ ಉಳಿದವರಿಗೂ ಈ ಚಾಳಿ ಅಂಟಿಕೊಳ್ಳುತ್ತದೆ ಆಗ ಗತಿಯೇನು? ಎಂದು ಚಿಂತೆಗೀಡಾದ ಗಂಗೊಂಡರಾಮ ಅವನನ್ನ ಖುದ್ದಾಗಿ ಕರೆಯಿಸಿಕೊಂಡು 'ಇನ್ಮುಂದೆ ಸಂಕಟದ ದಿನಗಳಲ್ಲಿ ಯಾವುದೇ ಕಾರಣಕ್ಕೂ ವಿನಾಯಿತಿ ನೀಡಲು ಸಾಧ್ಯವಿಲ್ಲ, ಹಾಗೇನಾದರೂ ರಜೆ ಬೇಕಾದರೆ ಒಂದು ದಿನ ಮೊದಲೆ ರಜೆಗೆ ಲಿಖಿತ ರೂಪದಲ್ಲಿ ಅರ್ಜಿ ನೀಡಬೇಕು. ಅದನ್ನ ಪರೀಕ್ಷಿಸಿ ರಜೆ ನೀಡುವುದೋ ಬಿಡುವುದೋ ನಾವು ನಿರ್ಧರಿಸುತ್ತೇವೆ' ಎಂದು ಖಡಕ್ ಸೂಚನೆ ನೀಡಿದನು. ಚಾಣಾಕ್ಷನಾದ ಸೋಹನ್ ಲಲ್ಲಾ 'ಇದು ರಾಜಾಜ್ಞೆಯಾಗಿದ್ದಲ್ಲಿ ಲಿಖಿತ ರೂಪದ ಆದೇಶ ತೋರಿಸಿ' ಎಂದನು. ಆಯಿತು ನಾಳೆಯೇ ನಾನೇನು ಅಂತ ತೋರಿಸುತ್ತೇನೆ ಎಂದು ಸೇನಾನಾಯಕ ಸುಮ್ಮನಾದ.

ಸೈನಿಕರು ರಾಜ್ಯದ ರಕ್ಷಕರು. ಅಷ್ಟೆ ಅಲ್ಲ, ಅವರೇ ನಮ್ಮ ಆಸ್ತಿ ಎಂದು ನಂಬಿದ್ದ ರಾಜ ವಿಕ್ರಮ್ ಸಿಂಹ ತನ್ನ ರಾಜ್ಯದ ಸೈನಿಕರನ್ನ ಗೌರವದಿಂದ ಕಾಣುವಂತೆ ತನ್ನ ಮಂತ್ರಿಗಳು ಮತ್ತು ಸೇನಾಧಿಪತಿಗಳಿಗೆ ತಿಳಿಸಿದ್ದ. ಅವರಿಗೆ ಸಕಲ ಸೌಲಭ್ಯಗಳನ್ನು ಒದಗಿಸುವಂತೆ, ಅವರು ಚೆನ್ನಾಗಿದ್ದರೆ ರಾಜ್ಯ ಎಂದು ಅವರಿಗೆ ಆದೇಶವನ್ನೂ ನೀಡಿದ್ದ. ಹಾಗಾಗಿ ಸೋಹನ್ ಲಲ್ಲಾನ ವಿರುದ್ಧ ಯಾವುದೇ ಕ್ರಮ ಕೈಗೊಂಡರೂ ಆತ ಪ್ರಶ್ನೆ ಮಾಡುತ್ತಾನೆ ನಾನೇ ಪ್ರಭುಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ.

